INDIAN JOURNAL OF HISTORY AND ARCHAEOLOGY

ISSN (e):2582-225X
Vol-3, Issue -1, May-June, 2021, Page No,31-37
Peer Reviewed Journal, Referred Journal

# ಗುಂಡ್ಲುಪೇಟೆ ತಾಲೋಕಿನ ಶಾಸನಗಳಲ್ಲಿ – ತೆರಿಗೆ ಪದ್ಧತಿ

**ಡಾ.ಹೆಚ್.ಎನ್.ಕಾಳಸ್ವಾಮಿ.**[1]

ರಾಜ್ಯದ ಮೂಲ ಆಧಾಯಗಳಲ್ಲಿ ತೆರಿಗೆಗಳು ಪ್ರಮುಖವಾಗಿವೆ. ಇದರಲ್ಲಿ ಕಂದಾಯದ ಮೂಲದಿಂದ ಬರುವ ಆದಾಯ, ವ್ಯಾಪಾರ–ವ್ಯವಹಾರದಿಂದ ಬರುವ ಆದಾಯಗಳು ಪ್ರಮುಖವಾಗಿದೆ. ಇವುಗಳಲ್ಲದೆ ಭೂಮಿ, ಮನೆ, ಮೊದಲಾದ ಆಸ್ತಿಗಳ ಮೇಲೆ, ಬೆಳೆಗಳ ಮೇಲೆ, ವೃತ್ತಿಗಳ ಮೇಲೆ ತೆರಿಗೆಗಳನ್ನು ಹಾಕುತ್ತಿದುದು ಶಾಸನಗಳಲ್ಲಿ ಉಲ್ಲೇಖವಾಗಿದೆ. ತೆರಿಗೆಯನ್ನು ಧಾನ್ಯದ ರೂಪದಲ್ಲಿ ನಗದು ರೂಪದಲ್ಲಿ ಮತ್ತು ಕೆಲವೊಮ್ಮೆ ಎರಡು ರೀತಿಯಲ್ಲೂ ಸಲ್ಲಿಸಬೇಕಾಗಿತ್ತು. ವ್ಯಾಪಾರಸ್ಥರ ಮೇಲೆ ಸ್ಥಳಾದಾಯ, ಮಾರ್ಗದಾಯ ಮತ್ತು ಮಾಮೂಲಿ ಆದಾಯಗಳೆಂದು ವಿಧಿಸಲಾಗುತ್ತಿತ್ತು". ಸ್ಥಳದಲ್ಲಿ ಉಪಯೋಗಿಸಲು ಆಮದಾದ ವಸ್ತುವಿನ ಮೇಲಿನ ಸುಂಕಕ್ಕೆ ಸ್ಥಳಧಾಯವೆಂತಲು, ವಸ್ತು ಸಾಗಾಣಿಕೆ ಸುಂಕಕ್ಕೆ ಮಾರ್ಗದಾಯ ಎಂತಲು ಮತ್ತು ದೇಶವಿದೇಶಗಳಿಗೆ ರಫ್ತಾಗುತ್ತಿದ್ದ ವಸ್ತುವಿನ ಮೇಲಿನ ಸುಂಕಕ್ಕೆ ಮಾಮೂಲು ಆದಾಯವೆಂತಲೂ ಕರೆಯುತ್ತಿದ್ದರು, ಹೀಗಿರುವಾಗ ಪ್ರಸ್ತುತ ಗುಂಡ್ಲುಪೇಟೆ ತಾಲೂಕಿನಲ್ಲಿ ಕಂಡು ಬರುವ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಸುಂಕ ಮತ್ತು ತೆರಿಗೆಗಳ ಬಗ್ಗೆ ಮಾಹಿತಿಯನ್ನು ಈ ಕೆಳಕಂಡಂತೆ ನೀಡಲಾಗಿದೆ.

ಕ್ರಿ.ಶ. 1157ರ ಬೇರಂಬಾಡಿ ಶಾಸನದಲ್ಲಿ ಗಣಚಾರಿ ತೆರಿಗೆಯ ಬಗ್ಗೆ ಮಾಹತಿ ಇದೆ. ಗುಂಡ್ಲುಪೇಟೆ ತಾಲ್ಲೂಕಿನ ತ್ರಿಯಂಬಕಪುರದ ಕ್ರಿ.ಶ. 1492ರ ಶಾಸನದಲ್ಲಿ ಉಮ್ಮತ್ತೂರಿನ ನಂಜರಾಜ ಒಡೆಯ, ಮಹಾಪ್ರಜಾಪಿತನಾದ ಪರ್ವತಯ್ಯ, ನಗರ ನಿರ್ಮಿಸಿ, ಕೆರೆ ಕಟ್ಟಿಸಿ, ಎಲೆ ತೋಟ ಹಾಕಿಸಿ, ದೇವಾಲಯಕ್ಕೆ ವರ್ಷಕ್ಕೆ 12 ಹೊನ್ನು ತೆರಿಗೆ ನೀಡುವಂತೆ ವ್ಯವಸ್ಥೆ ಮಾಡಿದ್ದನ್ನು ಪ್ರಸ್ತಾಪಿಸಿದೆ. ಇಲ್ಲಿ ಕೇವಲ ನಿರ್ಮಾಣವಷ್ಟೇ ಅಲ್ಲದೆ ಅದಕ್ಕೆ ಪೂರಕವಾಗಿ ನಡೆಯಬೇಕಾಗಿದ್ದ ವ್ಯವಸ್ಥಿತ ಕಾರ್ಯಚಟುವಟಿಕೆಗಳ ಅನುಷ್ಠಾನಕ್ಕೆ ಅಗತ್ಯವಿದ್ದ ಪೂರಕ ಕಾರ್ಯಗಳನ್ನು ಜೊತೆಯಾಗಿ ಕೈಗೊಂಡಿರುವುದು ದಾಖಲಾಗಿದೆ. ಒಡೆದು ಹೋಗಿದ್ದ ಕಟ್ಟೆಯನ್ನು ದುರಸ್ತಿಪಡಿಸಿದುದನ್ನು ದಾಖಲಿಸಿದೆ. ಇಲ್ಲಿ ಸ್ಥಳೀಯ ಜನರಿಂದಲೇ ಅಗತ್ಯ ಪರಿಕರ ಮತ್ತು ಕೌಶಲ್ಯದ ಬಳಕೆಯಾಗಿದ್ದು ಗಮನಾರ್ಹ ಅಂಶವಾಗಿದೆ.

---

[1].**ಸಂಶೋಧನಾ ಸಹಾಯಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.**

ಕ್ರಿ.ಶ.1504ರ ತೆರಕಣಾಂಬಿಯ ಶಾಸನದಲ್ಲಿ ತೇರ ಕಾಣಿಕೆ ಎಂಬ ತೆರಿಗೆಯ ಉಲ್ಲೇಖವು ಕಂಡುಬರುತ್ತದೆ. ಕ್ರಿ.ಶ.1469ರ ಶಿವಪುರ ಶಾಸನವು ಕುಡುಗುನಾಡ ತೆರಕಣಾಂಬಿ ಸ್ಥಳದ ಗೊಂದಿಗನಹಳ್ಳಿಯನ್ನು ಗ್ರಾಮದ ಚುತುಸೀಮೆಯನ್ನು ಮಹಾ ಮಂಡಲೇಶ್ವರ ಸೋಮರಾಮ ಒಡೆಯರ ಕುಮಾರ ದೇವರಾಜ ಒಡೆಯರು ಧಾರಾಪೂರ್ವಕವಾಗಿದಾನಕೊಟ್ಟ ವಿಷಯವನ್ನು ತಿಳಿಸುತ್ತದೆ ಹಾಗೂ ಇಲ್ಲಿ ಕುಂಬಾರದೆರಿಗೆ ತಿವಳದೂಳದರೆ ಎಂಬ ತೆರಿಗೆ ಉಲ್ಲೇಖವಿದೆ.

ಹೊಣಕನಹಳ್ಳಿ ಗ್ರಾಮ ನಿವೇಶನದಲ್ಲಿರುವ ಕ್ರಿ.ಶ. 1506ರ ಶಾಸನ ವಿಜಯನಗರದ ಅರಸು ವೀರನರಸಿಂಹ ಮಹಾರಾಯನು ಆಳ್ವಿಕೆ ಮಾಡುತ್ತಿರುವಾಗ ಭೂದಾನಾದಿ ಷೋಡಶ ಮಹಾದಾನಗಳಲ್ಲಿ ಒಂದಾದ ಮಹಾಭೂತಘಟವೆಂಬ ಮಹಾದಾನವನ್ನು ಶ್ರೀರಂಗಕ್ಷೇತ್ರವಾದ ಉಭಯ ಕಾವೇರಿ ಮಧ್ಯೆ ಚಂದ್ರಪುಷ್ಕರಣೀ ತೀರದಲ್ಲಿ ಶ್ರೀರಂಗನಾಥದೇವರ ಸನ್ನಿಧಿಯಲ್ಲಿ ಭಾರ ದ್ವಾಜಗೋತ್ರದ ಯಜುಶ್ಯಾಖಾಧ್ಯಾಯಿಗಳಾದ ಆಪಸ್ತಂಭಸೂತ್ರದ ಲಕ್ಷೀನಾಥ ದೀಕ್ಷಿತರ ಪುತ್ರರಾದ ಷಡುದರುಷನ ಪಾರಂಗತರಾದ ರಂಗನಾಥ ಭಟ್ಟರಿಗೆ ಆಚಾರಿಕೆಯನ್ನು ಕೊಟ್ಟು ಸಹಿರಣ್ಯೋದಕ ವಾಗಿ ಒಂದು ಗ್ರಾಮವನ್ನು ಧಾರೆಯನೆರೆದು ಆ ಗ್ರಾಮವನ್ನು ‘ಗಜಮೃಗಯ ವಿಹಾರ ವಿಖ್ಯಾತ ರಾದ ಸೂರ್ಯಕುಲ ಪ್ರಸೂತರಾದ ಪೆನುಗೊಂಡೆ ಚಕ್ರೇಶ್ವರ ಅನೇಕ ಬಿರುದಾಂಕಿತ ದೇಪಣ್ಣ ವೊಡೆಯರ ಕುಮಾರರು ಶ್ರೀವೀರಚಿಕ್ಕರಾಜವೊಡೆಯರ ರಾಜ್ಯದಲ್ಲಿ ತೆರಕಣಾಂಬಿಯ ನಾಡೊಳಗೆ ಕುಡುಗುನಾಡ ಹೊನ್ನಕಹಳಿಯೆಂಬ ಗ್ರಾಮದಿಂದ ಭಂಡಾರಕ್ಕೆ ತೆರುವ ಸಮಸ್ತ ಕುಳವರಿ ವಿರಾಡ ಕಾಣಿಕೆ ಬೇಡಿಗೆ ಹೊನ್ನು ಹೊಂಬಳ ದವಸ ಧಾನ್ಯ ಗಣಾಚಾರದೆರಿಗೆ, ಕಮ್ಮಾರದೆರಿಗೆ, ಕುಳದೆರಿಗೆ, ಎಲೆಯತರುಗು, ಮಾದಾರಿಕೆ ಉಪಿನಕಾವಲ ಜೀಯದೆರಿಗೆ ಸುಂಕ ಮೊದಲಾದ ಸಮಸ್ತ ತೆರಿಗೆ ಹೊರಿಗೆ ಎಲ್ಲದರ ಕುಳವ ಕಡಿದು ಸರ್ವಮಾನ್ಯದ ಚಿಕ್ಕರಾಯಪುರವೆಂಬ ಹೆಸರಿನ ಅಗ್ರಹಾರವನ್ನು ಮಾಡಿ ಚತುಸ್ಸೀಮೆಯ ಗಡಿಯ ನಾಲ್ಕು ಕಡೆಗಳಲ್ಲಿ ವಾಮನಮುದ್ರೆಯ ಕಲ್ಲು ನೆಡಸಿ ಊರಮುಂದೆ ಶಿಲಾಶಾಸನ (ದಾನದ ವಿವರ ಉಲ್ಲೇಖಿಸಿದೆ) ನೆಟ್ಟು ಕೆರೆ ಕಟ್ಟೆ ಕಾಲುವೆ ಗದ್ದೆ ಬೆದ್ದಲು ತೋಟ ತುಡಿಕೆ ಗಿಡು ಬೆಟ್ಟ ಗ್ರಾಮನಿವೇಶನ ಅಲ್ಲಿಯ ಸಮಸ್ತ ವೊಕ್ಕಲನವರು ತೆರುವ ಹಾಗೂ ಗ್ರಾಮದ ನಾನಾಜಾತಿಗಳು ತೆರುವ ಜಾತಿತೆರಿಗೆ, ನಾನಾ ಸಮಯದೆರಿಗೆ ಎಲ್ಲವನ್ನು ಪೂರ್ವದ ಮರ್ಯಾದೆಯಂತೆ ಎಂದು ರಂಗನಾಥ ಭಟ್ಟರಿಗೆ ನೀಡಿದ ದತ್ತಿಯ ಉಲ್ಲೇಖವಿದೆ. ಕ್ರಿ.ಶ. 1507ರ ರಾಘವಾಪುರ ಶಾಸನದಲ್ಲಿ ಶ್ರೀ ನಂಜುಂಡೇಶ್ವರ ದೇವರ ಅಮೃತಪಡಿಗೋಸ್ಕರ ರಾಘವಾಪುರ ಹೊಂಪುರ ಗ್ರಾಮಗಳ ಆದಾಯದಿಂದ ಅನೇಕ ತೆರಿಗೆಗಳಾದ ಸುಂಕ, ವೊಳವಾಱು, ಕಂಮಾಱದೆಱ್, ಕುಂಬಾರದೆಱ್, ಗಣವಾರಿಕೆ, ಕವಲಿ, ಭೋಗಾಱಿಕೆ, ಮಾದಱ್ಕೆ ಮುಂತಾದ ತೆರಿಗೆಗಳಿಂದ ಹಾಗೂ ತೋಟ ಮತ್ತು ಭೂಮಿಯನ್ನು ವೀರಚಿಕ್ಕರಾಯವೊಡೆಯರು ಸಮರ್ಪಿಸಿದ ದಾಖಲೆಯಿದೆ. ಕ್ರಿ.ಶ.1413ರ ಕೃಷ್ಣದೇವರಾಯನ ತ್ರಿಯಂಬಕಪುರ ಶಾಸನದಲ್ಲಿ ರಾಚಿರಾಜನ ಮಗ ಸಾಳುವ ಗೋವಿಂದರಾಜನು ಕೃಷ್ಣದೇವರಾಯನಿಗೆ

ಪುಣ್ಯವಾಗಬೇಕೆಂದು ತೆರಕಣಾಂಬಿಯ ಸೀಮೆಯ ಒಳಗೆ ತ್ರಿಯಂಬಕಪುರ ದೇವರ ಕರ್ಪೂರ ವೀಳೆಗೋಸ್ಕರ ಅನೇಕ ತೆರಿಗೆಗಳಿಂದ ದಾನ ನೀಡಿದ ವಿವರವಿದೆ.

ತ್ರಿಯಂಬಕಪುರದ ದೇವಾಲಯದಲ್ಲಿರುವ ಕ್ರಿ.ಶ. 1513ರ ಶಾಸನವು ಕೃಷ್ಣರಾಯರು ಆಳುತ್ತಿರುವಾಗ ಕೌಂಡಿನ್ಯಗೋತ್ರ ಆಪಸ್ಥಂಭಸೂತ್ರದ ಯಜುಶಾಕಾಧ್ಯಾಯ ರಾಚಿರಾಜಗಳ ಮಕ್ಕಳು ಸಾಳುವ ಗೋವಿಂದರಾಜನು ತಮ್ಮ ನಾಯಕತನಕ್ಕೆ ಸಲುವ ತೆರಕಣಾಂಬೆಸೀಮೆಯ ಒಳಗೆ ತ್ರಿಯಂಬಕಪುರ ಮದ್ದೂರು ಹಾಗೂ ಕಾಲುವಳ ಎಳಗನೂರು ಬೆಳಾಮೆ ಕಾಲುವಳ ಕೊಟ ಸೋಗೆ, ಬೊಮ್ಮನಹಳ್ಳಿ, ತುಪೂರು, ಪುರತಂಣಿಲೆ, ಬಲಚವಾಡಿ, ಮಂಗಲದಮಾಳ ಕ್ರಯವಾಗಿ ಬಂದ ಮಾಧವಪಟ್ಟಣ ಇಷ್ಟು ಗ್ರಾಮಗಳಿಂದ ತೆರಕಣಾಂಬಿಯ ಭಂಡಾರಕ್ಕೆ ಬರುವ ತೆರಿಗೆಗಳು ಬೆಟ್ಟದಕಾವಲು, ಬೋಗಾರದೆರಿಗೆ, ಗಣಾಚಾರದೆರಿಗೆ, ಕೋಜುಗಳತೆರಿಗೆ, ದಾಸುಗಳತೆರಿಗೆ, ಆಹದೆರಿಗೆ, ಅಸಗರತೆರಿಗೆ, ನಾಯಿಂದರತೆರಿಗೆ, ಕುಂಬಾರತೆರಿಗೆ, ಗಾಣದಸುಂಕ, ಉಪಲಿಗ ಕಾವಲಿ ಸುಂಕ, ಮಗ್ಗಸುಂಕ ಮಾದಾರಿಕೆ, ಸಿರಿಯೂರ ವರ್ತನೆ ಮೊದಲಾದ ಹಲವಾರು ತೆರಿಗೆಗಳ ಆದಾಯವನ್ನು ವೀರಪ್ರತಾಪಕೃಷ್ಣರಾಯರಿಗೆ ಪುಣ್ಯವಾಗಬೇಕೆಂದು ಕೃಷ್ಣರಾಯರ ನಿರೂಪದಿಂದ ತ್ರಿಯಂಬಕದೇವರಿಗೆ ಕರ್ಪೂರವೀಳೆಯ ಸಲುವ ಹಾಗೆ ಈ ಹೊನ್ನನ್ನು ತೆರಕಣಾಂಬಿಯ ಲೆಕ್ಕ ದೊಳಗೆ ಕುಳವನ್ನು ತಡೆಸಿ ಸರ್ವತೆರಿಗೆಯನ್ನು ಮನ್ನಾಮಾಡಿ ಸಾಳುವ ಗೋವಿಂದರಾಜನು ಧಾರೆಯನೆರೆದು ದಾನ ಕೊಟ್ಟ ಉಲ್ಲೇಖವಿದೆ.

ತ್ರಿಯಂಬಕಪುರದ ತ್ರಿಯಂಬಕೇಶ್ವರ ದೇವಾಲಯದ ಅರ್ಚಕರ ವಶದಲ್ಲಿರುವ ತಾಮ್ರಶಾಸನ ಕ್ರಿ.ಶ. 1521ಕ್ಕೆ ಸೇರಿದೆ. ಇದು ವಿಷು ಸಂವತ್ಸರದ ಪುಷ್ಯಶುದ್ಧ ತದಿಗೆಯ ಮಕರಸಂಕ್ರಾಂತಿ ಪುಣ್ಯ ಕಾಲದಲ್ಲಿ ವಿರೂಪಾಕ್ಷದೇವರ ಸನ್ನಿಧಿಯಲ್ಲಿ ಕೃಷ್ಣರಾಯರು ತ್ರಿಯಂಬಕಲಿಂಗದೇವರಿಗೆ ಅಂಗ ಭೋಗ ರಂಗಭೋಗ ತಿರುಪಣಿ ಕಟ್ಟೆಕಾಲುವೆ ಇಷ್ಟಕ್ಕೂ ಸಲ್ಲುವಂತೆ ದಾನ ನೀಡಿದ ಭೂದಾನದ ವಿವರ ಹೀಗಿದೆ – 'ತೆರಕಣಾಂಬಿ ಸ್ಥಳದ ಕೋಡಿಹಳ್ಳಿ ಗ್ರಾಮವೊಂದರಲ್ಲಿ 398 ಹೊನ್ನು, ಕಾಲು ವಳಗ್ರಾಮ ಅಣಿಯೂರು ಗ್ರಾಮದಲ್ಲಿ 42 ಹೊನ್ನು 4 ಹಣ, ಚನ್ನಯ್ಯನಪುರದ ಗ್ರಾಮವೊಂದಕ್ಕೆ 37 ಹೊನ್ನು 2 ಹಣ. ಈ ಮೂರು ಗ್ರಾಮಗಳೂ ಸೇರಿ ಒಟ್ಟು 477 ಹೊನ್ನು 6 ಹಣ, ಚಿರುಕನಹಳ್ಳಿಯ ಗ್ರಾಮವೊಂದಕ್ಕೆ 80 ವರಹ, ಹೊಸಹಳ್ಳಿಗ್ರಾಮಕ್ಕೆ 55 ವರಹ, ಚೌಡೇಹಳ್ಳಿಯ ಗ್ರಾಮವೊಂದಕ್ಕೆ 60 ವರಹ, ಆ ಕಾಲುವಳ ಪುರಗ್ರಾಮಕ್ಕೆ 25 ವರಹ, ಮಂಗಲದಮಾಲದಿಂದ 15 ವರಹ, ಮೊಲುವುಂಮವೊರ ನಂಜರಾಯನ ಕಾಲದಲ್ಲಿ ಕೊಟ್ಟು ನಡದುಬಂದ ಗ್ರಾಮ ಬೊಮ್ಮನಹಳ್ಳಿ ಆ ಕಾಲುವಳಪುರ ಸಹ ಗ್ರಾಮವೆರಡಕ್ಕೆ 40 ವರಹ, ತೂಪುರು ಆ ಪುರಸಹ ಗ್ರಾಮವೆರಡಕ್ಕೆ 250 ವರಹ ಮತ್ತು ತ್ರಿಯಂಬಕದೇವರಿಗೆ ಸಲುವ ಗ್ರಾಮಗಳು ಹೊರತೆರಿಗೆ ಬಿಟ್ಟು ದೇವಸ್ಥಾನಕ್ಕೆ ಪಾಲಿಸಿದರು – ಗಣಾಚಾರ

ತೆರಿಗೆ ಕಮ್ಮಾರ ತೆರಿಗೆ, ಕುರಿತೆರಿಗೆ, ಮಾದಾರಿಕೆ ಉಪ್ಪಿನ ಕಾವಲ ಸುಂಕ ಯೆಲೆತರಗು ಬೆಟ್ಟದ ಕಾವಲು, ಇಷ್ಟನ್ನು ಸರ್ವಮಾನ್ಯವಾಗಿ ಬಿಟ್ಟದ್ದು 67 ವರಹ 6 ಹಣ. ಇದಲ್ಲದೆ ಇನ್ನೂ ಹಲವಾರು ಊರುಗಳ ವರಹಗಳನ್ನು ದಾನವಾಗಿ ಧಾರೆಯನೆರೆದು ಸಮರ್ಪಿಸಿದ ಉಲ್ಲೇಖವಿದೆ. ಈ ತಾಮ್ರಶಾಸನವನ್ನು ಸಭಾಪತಿಯು ರಚನೆ ಮಾಡಿದ್ದಾನೆ ಮತ್ತು ಕೃಷ್ಣದೇವರಾಯನ ಆಜ್ಞೆಯಂತೆ ಮಲ್ಲಣ್ಣಾಚಾರಿಯ ಮಗ ವೀರಣ್ಣಾಚಾರಿಯು ಕೆತ್ತಿದ್ದಾನೆ.

ತ್ರಿಯಂಬಕಪುರದ ತ್ರಿಯಂಬಕೇಶ್ವರ ದೇವಾಲಯದ ಪ್ರಾಕಾರದಲ್ಲಿರುವ ಕ್ರಿ.ಶ. 1521ರ ಶಾಸನವು ತ್ರಿಯಂಬಕದೇವರ ಅಂಗ-ರಂಗವೈಭವ ನಡೆಯಬೇಕೆಂದು ಕೃಷ್ಣಮಹಾರಾಯರ ನಿರೂಪದಿಂದ ಕೌಂಡಿನ್ಯ ಗೋತ್ರ ಆಪಸ್ತಂಭಸೂತ್ರದ ಯಜುಶಾಕಾಧ್ಯಾಯರಾದ ರಾಚಿರಾಜನ ಮಕ್ಕಳು ಸಾಳುವ ಗೋವಿಂದರಾಜನಿಗೆ ಕೃಷ್ಣಮಹಾರಯರು ನಾಯಕತನಕ್ಕೆ ಪಾಲಿಸಿದ ಕುಡುಗು ನಾಡ ತೆರಕಣಾಂಬೆಯ ಸ್ಥಳದಲ್ಲಿ ಕೋಡಹಳ್ಳಿಯ ಕಾಲುವಳ ಅಣ್ಣಿಯೂರು ಚನ್ನಯ್ಯನಪುರ ಸಹ ಆ ಕೋಡಿಹಳ್ಳಿಯ ಗ್ರಾಮಕ್ಕೆ ಸಲ್ಲುವ ತೆರಿಗೆಗಳಲ್ಲದೆ ಬೋಗಾರದೆಱಿಗೆ, ಗಣಚಾರತೆಱಿಗೆ, ವೋಜುಗಳತೆಱಿಗೆ, ದಾಸುಗಳತೆಱಿಗೆ, ಹಳದೆಱಿಗೆ, ಅಸಗರತೆಱಿಗೆ, ನಾಯಿಂದರತೆಱಿಗೆ ಕುಂಬಾರ ತೆಱಿಗೆ, ಗಾಣದಸುಂಕ, ಕುಂಬನಕಾವಲಸುಂಕ, ಮಗ್ಗಸುಂಕ, ಮಾದಾಱಿಕೆ ಸಲಿಯೂರ ವರ್ತನೆ ಮುಂತಾದ ಸರ್ವತೆರಿಗೆಗಳನ್ನು ಕಾಲುವಳ ಗ್ರಾಮಗಳು ಸೇರಿದಂತೆ ತೆರಕನಾಂಬಿಯ ಲೆಕ್ಕದಲ್ಲಿ ಕುಳವನು ತರಿದು (ತೆರಿಗೆಯನ್ನು ಮನ್ನಾ ಮಾಡಿ) 477 ಗದ್ಯಾಣದ ಆದಾಯವನ್ನು ಶ್ರೀಗುರುಮೂರ್ತಿ ತ್ರಿಯಂಬಕದೇವರ ಅಂಗರಂಗವೈಭವ ನಡೆಯಲು ದಾನ ನೀಡಲಾಗಿದೆ. ದಾನವನ್ನು ಶ್ರೀವೀರಪ್ರತಾಪ ಕೃಷ್ಣರಾಯಮಹಾರಾಯರಿಗೆ ಬಹ್ವಶ್ವಗಜಸೇನಾ ಸಮೃದ್ಧಿಯಾಗಬೇಕೆಂದು ಮತ್ತು ದಿಗ್ವಿಜಯ ಸಾಮ್ರಾಜ್ಯವಾಗಬೇಕೆಂದು ಮಕರಸಂಕ್ರಾಂತಿ ಪುಣ್ಯಕಾಲದಲ್ಲಿ ತುಂಗಭದ್ರಾತೀರದ ವಿರೂಪಾಕ್ಷದೇವರ ಸನ್ನಿಧಿಯಲ್ಲಿ ದಾನವನ್ನು ಸಾಳುವ ಗೋವಿಂದರಾಜನು ತ್ರಿಯಂಬಕದೇವರ ಅಮೃತಪಡಿ ಅಂಗ-ರಂಗವೈಭವ ನಡೆಯಬೇಕೆಂದು ಧಾರೆಯನೆರೆದು ಕೊಟ್ಟ ಉಲ್ಲೇಖವಿದೆ.

ಕೋಡಿಹಳ್ಳಿ ಮಾರೀಗುಡಿ ಬಳಿ ಇರುವ ಕ್ರಿ.ಶ. 1521ರ ಶಾಸನವು ಕೃಷ್ಣರಾಯರು ಆಳು ತ್ತಿರುವಾಗ ಕೌಂಡಿನ್ಯಗೋತ್ರ ಆಪಸ್ಥಂಭಸೂತ್ರದ ಯಜುಶಾಕಾಧ್ಯಾಯ ರಾಚಿರಾಜಗಳ ಮಕ್ಕಳು ಸಾಳುವ ಗೋವಿಂದರಾಜನು ತಮ್ಮ ನಾಯಕತನಕ್ಕೆ ನೀಡಿದ ತೆರಕಣಾಂದೆಯ ಸ್ಥಳದಲ್ಲಿ ಕೋಡಿ ಹಳ್ಳಿಯ ಗ್ರಾಮ ಒಂದು, ಚನ್ನಯ್ಯನಪುರ ಒಂದು ಬೆಟ್ಟದಕಾವಲು ಬೋಗಾರದೆರಿಗೆ, ಗಣಾಚಾರ ದೆರಿಗೆ, ವೋಜುಗಳತೆರಿಗೆ, ದಾಸುಗಳತೆರಿಗೆ, ಆಹಳ ತೆರಿಗೆ, ಅಸಗರತೆರಿಗೆ, ನಾಯಿಂದರತೆರಿಗೆ, ಕುಂಬಾರತೆರಿಗೆ, ಗಾಣದಸುಂಕ, ಉಪ್ಪಗೆಕಾವಲ ಮಗ್ಗಸುಂಕ ಮಾದಾರಿಕೆ, ಸಿರಿಯೂರ ವರ್ತನೆ ಮೊದಲಾದ ಸರ್ವ ತೆರಿಗೆಗಳ ಆದಾಯವನ್ನು ಕಣಾಂಬೆಯಲ್ಲಿ ಕದಲ ಕುಳವ ತರಿದು ಮಕರ ಸಂಕ್ರಾಂತಿಯ ದಿನದಂದು

ತುಂಗಭದ್ರಾತೀರದ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ಬಾಸ್ಕರ ನಕ್ಷತ್ರದಲ್ಲಿ ನಮ್ಮ ಸ್ವಾಮಿ ವೀರಪ್ರತಾಪಕೃಷ್ಣರಾಯರಿಗೆ ಬಹ್ವಶ್ವಗಜ ಸಮೃದ್ಧಿಯಾಗಬೇಕೆಂದು ಮತ್ತು ದಿಗ್ವಿಜಯ ಸಾಮ್ರಾಜ್ಯವಾಗಬೇಕೆಂದು ಶ್ರೀ ಗುರುಮೂರ್ತಿ ತ್ರಯಂಬಕದೇವರ ಅಂಗರಂಗ ವೈಭವ ನಡೆತಬೇಕೆಂದು ದಾನ ನೀಡಿದ ಉಲ್ಲೇಖವಿದೆ. ಹಾಗೇಯೆ ಇದೇ ತೇದಿಯ ಗುಂಡ್ಲುಪೇಟೆ ತಾಲೂಕಿನ ತ್ರಿಯಂಬಕೇಶ್ವರ ದೇವಾಲಯದ ಪ್ರಾಕಾರದಲ್ಲಿರುವ ಗುಂಡ್ಲುಪೇಟೆಯ-134ನೆಯ ಶಾಸನವೂ ಸಹ ಸಾಳುವ ಗೋವಿಂದರಾಜನು ಅವನ ನಾಯಕತನಕ್ಕೆ ಪಾಲಿಸಿದ ಗುನಾಡ ತೆರಕಣಾಂಬಿಯ ಗ್ರಾಮಗಳ ತೆರಿಗೆಯನ್ನು ಕೃಷ್ಣರಾಯ ಮಹಾರಾಯರಿಗೆ 'ಬಹು ಅಶ್ವಗಜ ಸೇನಾ ಸಮ್ಮೃದ್ಧಿಯಾಗಿಬೇಕೆಂದು. ದಿಗ್ವಿಜಯ ಸಾಮ್ರಾಜ್ಯವಾಗಬೇಕೆಂದು' ತ್ರಿಯಂಬಕದೇವರ ಅಮೃತಪಡಿ ಅಂಗ-ರಂಗವೈಭವಕ್ಕೆ ನೀಡಿದ ವಿಷಯವನ್ನು ಹೇಳಿದೆ.

ತೆರಕಣಾಂಬಿಯ ರಾಮಭದ್ರದೇವಾಲಯದ ಪಾತಾಳಾಂಕಣದಲ್ಲಿರುವ ಕ್ರಿ.ಶ. 1521ರ ಶಾಸನದಲ್ಲಿ ಮಹಾಪ್ರಧಾನ ಸಾಳುವ ಗೋವಿಂದರಾಯರು ಕೃಷ್ಣದೇವರಾಯರಿಗೆ ಪುಣ್ಯವಾಗ ಬೇಕೆಂದು ತೆರಕಣಾಂಬಿಯ ಆಳ್ವಾರದೇವರ ರಥೋತ್ಸವ ನಡೆಸುವುದಕ್ಕಾಗಿ ತೆರಕಣಾಂಬಿಗೆ ಸಲ್ಲುವ ಗ್ರಾಮಗಳೊಳಗೆ ದೇವದಾಯ ಬ್ರಹ್ಮದಾಯ ಹೊರಗಾಗಿಯೂ ತಾರದಾಡಕ್ಕೆ ಸಲ್ಲುವ ಪ್ರತ್ಯೇಕ ಗ್ರಾಮಾನುಗ್ರಾಮಗಳು ಹಳ್ಳಿಹರಿವೂರ ಪುರಗಳು ಮೊದಲಾದ ಪ್ರತ್ಯೇಕ ಗ್ರಾಮಗಳಿಂದ ಪ್ರತ್ಯೇಕ ಹಳ್ಳಿಗಳಿಂದ ಎರಡೆರಡು ಹಣದಂತೆ ಪಡೆಯುವಂತೆ ತೆರಕಣಾಂಬಿಯ ಪಾರುಪತ್ಯೆಗಾರ ಅಯ್ಯಪ್ಪಗಳ ಮಂಟಪರಸರಿಗೆ, ಮಾಗಯರ ನಂಜಯರಸರಿಗೆ ಅಪ್ಪಣೆ ಕೊಟ್ಟ ಧರ್ಮಶಾಸನ. ಈ ತೇರಕಾಣಿಕೆಯ ಹೊನ್ನು ತೆರಕಾಂಣಿಯ ಚಾವಡಿಗೆ ಚಿಕ್ಕಪಾರುಪತ್ಯಗಾರರು ಈ ಲೆಕ್ಕದಲ್ಲಿ ಕುಳವಾಸಿಯಕ್ಕೆ ಕೊಟ್ಟು ಆಳ್ವಾರದೇವರ ರಥೋತ್ಸವವನ್ನು ಆಚಂದ್ರಾರ್ಕಸ್ಥಾಯಿಯಾಗಿ ನಡೆಸಿ ಕೊಂಡು ಬರುವಂತೆ ಉಲ್ಲೇಖಿಸಿದೆ. ಕ್ರಿ.ಶ. 1548ರ ಕೋಟೆ ಕೆರೆಯ ಶಾಸನದಲ್ಲಿ ಮೋಗ್ಗ, ಫಲಾದಾಯ, ಮನೆದಾನ, ಆಡದೆರೆ ಎಂಬ ತೆರಿಗೆಗಳ ಉಲ್ಲೇಖವಿದೆ.

ಬೇರಂಬಾಡಿ ಚಾವಡಿ ಮುಂದಿರುವ ಕ್ರಿ.ಶ.1562ರ ಶಾಸನದಲ್ಲಿ ವಿಜಯನಗರದ ರಾಮರಾಜದೇವರ ಊಳಿಗದ ಬಸವಪ್ಪ ಗೌಡಯ್ಯನು ತೆರಕಣಾಂಬಿಯ ಗಣಾಚಾರಿಗೆ 'ಕಾಳಾಂಚಿ'ಯಾಗಿ ವಿಜಯಪುರ ಸೀಮೆಯ ಬೇರಂಬಾಡಿಯ ಎಲ್ಲಾ ಆದಾಯವನ್ನು ಅನುಭವಿಸುವಂತೆ ದಾನ ನೀಡಿದೆ. ಕಡೆಯಲ್ಲಿ ಶ್ರೀನಂಜುಂಡೇಶ್ವರವೊಪ್ಪ ಎಂದಿದೆ.

ಶ್ರೀರಂಗರಾಯನ ಆಳ್ವಿಕೆಯಲ್ಲಿ ಸೋಮನಹಳ್ಳಿ ಊರಮುಂದಿರುವ ಕ್ರಿ.ಶ. 1576ರ ಶಾಸನವು ಮಹಾಮಂಡಳೇಶ್ವರ ರಾಮರಾಯ ಮತ್ತು ದಳವಾಯಿ ವೆಂಕಟಪ್ಪನಾಯಕರು ಎರಡು ಛತ್ರಗಳನ್ನು ನಿರ್ಮಿಸಿ ಅವುಗಳಲ್ಲಿ ಒಂದನ್ನು ಜಂಗಮರಿಗೆ ಮತ್ತೊಂದನ್ನು ಬ್ರಾಹ್ಮಣರ ಆರೋಗಣೆಗೆ ದಾನವಾಗಿ

ಕೊಟ್ಟರು. ಈ ದಾನವನ್ನು ತಂದೆ ತಿರುಮಲರಾಯರಿಗೆ ಪುಣ್ಯವಾಗಬೇಕೆಂದು ಈ ಎರಡು ಛತ್ರಗಳ ನಿರ್ವಹಣೆಗಾಗಿ ತೆರಕಣಾಂಬಿಗೆ ಸೇರಿದ ಸೋಮನಹಳ್ಳಿಯನ್ನು ಮಹಾಮತ್ತಿನೊಳಗಾದ ನಂಜುನಗೂಡು ಹಿರಿಯ ಪಟ್ಟದ ಗಂಗಾಧರದೇವರಿಗೆ ನೀಡಿದೆ. ಈ ಭೂಮಿಯಲ್ಲಿನ ಗದ್ದೆ, ಬೆದ್ದಲು, ತೋಟ, ತುಡಿಕೆ ಆಡುಮನೆ ಕಳಕೊಟಾರ ಸುವರ್ಣಾದಾಯ ಅಡ್ಡದೆರಿಗೆ ಕಳಕೊಟಾರ ಸುವರ್ಣಾದಾಯ ಅಡ್ಡದೆರಿಗೆ ಚೌದರಿಗೆ ಮನ್ನಮಾಡಿ ಊರಮುಂದೆ ಲಿಂಗಮುದ್ರೆ ಶಿಲಾಶಾಸನ ನೆಡಸಿ ದಾನಮಾಡಿದಂತೆ ಹೇಳಿದೆ. ದೇಶಿಪುರಗ್ರಾಮದ ಕ್ರಿ.ಶ. 1587ರ ಶಾಸನವು ವೀರಪ್ರತಾಪ ವೆಂಕಟಪತಿರಾಯ ವಿಜಯನಗರ ಸಾಮ್ರಾಜ್ಯವನ್ನು ಆಳುತ್ತಿದ್ದಾಗ ಮೈಸೂರು ಅರಸ ದೇವರಾಯವಡೆಯರಯ್ಯನ ಪುತ್ರ ದೇವರಾಜವಡೆಯರಯ್ಯನು 'ಕಪ್ಪನೀಕುಂಡನಿ ಸಂಗಮಕ್ಷೇತ್ರದಲು ನಂಜುಂಡೇಶ್ವರ ಸ್ವಾಮಿಯ' ಉತ್ತರಭಾಗದಲ್ಲಿ ಮಲ್ಲನ ಮೂಲೆಯಲ್ಲಿ ನೂತನ ವಿರಕ್ತಮಠವನ್ನು ಕಟ್ಟಿಸಿ 'ಪ್ರಣಮಪ್ಪ ಚನ್ನವೀದೇವರವಡೆಯ'ರೆಂಬ ವಿರಕ್ತ ಸ್ವಾಮಿಯವರಿಗೆ ಸರ್ವಮಾನ್ಯವಾಗಿ ಹೂಕುಂದ ದೇಸಪುರ ಈ ಎರಡೂ ಗ್ರಾಮದ ಚತುಸೀಮೆಗೆ ಸಲ್ಲುವ ಕುಳಭೂಮಿಯೂ ಸೀಗೆ ಶ್ರೀಗಂಧ ಸ್ಥಳದ ಸುಂಕವನ್ನು ಆಚಂದ್ರಾರ್ಕಸ್ಥಾಯಿಯಾಗಿ ನಡೆಯಲೆಂದು ಶಿವಾರ್ಪಿತವಾಗಿ ಕೊಟ್ಟ ದತ್ತಿಯಾಗಿದೆ.

ಕ್ರಿ.ಶ. 1656ರ ಹಂಗಳ ಶಾಸನವು ವಿಜಯನಗರದ 3ನೇ ಶ್ರೀರಂಗರಾಯನ ಕಾಲಕ್ಕೆ ಸೇರಿದ ಶಾಸನದಲ್ಲಿ ಮುರುಳಬಸವಲಿಂಗ ದೇವರಿಗೆ ಹಂಗಳ ಸ್ಥಳದ ವರಕೇರಿ ಬಾಚಳ್ಳಿ ಸಲ್ಲುವ ಚತುಸೀಮೆ ವಳಗನ, ಮನೆವನ, ಜಾತಿದೆರಿಗೆಯನ್ನು ಸರ್ವಮಾನ್ಯ ಮಾಡಿದ ಬಗ್ಗೆ ಶಾಸನದಲ್ಲಿ ಉಲ್ಲೇಖಗೊಂಡಿದೆ. ಕ್ರಿ.ಶ. 16ನೇ ಶತಮಾನದ ಪಡಗೂರಿನ ಶಾಸನದಲ್ಲಿ ಸಾರಿಗೆಯ ತೆರಿಗೆಯ ಬಗ್ಗೆ ತಿಳಿಸುತ್ತದೆ. ಕ್ರಿ.ಶ. 1751ರ ಮಾದಾಪಟ್ಟಣ ಶಾಸನವು ಕೃಷ್ಣರಾಜ ಒಡೆಯರ ಕಾಲಕ್ಕೆ ಸೇರಿದ್ದು, ಹಲವು ಪದಾರ್ಥಲಳ ಮೇಲೆ ವಿಧಿಸಿದ "ಮಗಮೆ" ಸುಂಕವನ್ನು ಅನ್ನ ಸತ್ರವೊಂದರ ನಿರ್ವಃಣೆಗೆ ಐವತ್ತಾರು ದೇಶದ ಪಲರು ಪಟ್ಟಕಾರರು ದಾನ ನೀಡಿದುದನ್ನು ಉಲ್ಲೇಖಿಸುತ್ತದೆ. ಹೀಗೆ ಗುಂಡ್ಲುಪೇಟೆ ತಾಲೂಕಿನ ಶಾಸನಗಳಲ್ಲಿ ತೆರಿಗೆ ಬಗ್ಗೆ ಉಲ್ಲೇಖವಿರುವುದನ್ನು ಕಾಣುತ್ತೇವೆ.

**ಪರಾಮರ್ಶನ ಗ್ರಂಥಗಳು**


1. ಕನ್ನಡ ವಿಷಯ ವಿಶ್ವಕೋಶ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–2005
2. ಸೂರ್ಯನಾಥ ಕಾಮತ್ ಯು (ಸಂ) ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ–1, ಕರ್ನಾಟಕ ಸರ್ಕಾರ, ಬೆಂಗಳೂರು–1984
3. ಚಿದಾನಂದಮೂರ್ತಿ, ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು,2013.

4. ನರಸಿಂಹಮೂರ್ತಿ, ಎ.ವಿ., ಕರ್ನಾಟಕ ನಾಣ್ಯ ಪರಂಪರೆ, ಪೀಠಿಕೆ, 2003.
5. ನಾಯಕ,ಹಾ.ಮಾ,– ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–4,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ., ಮೈಸೂರು,1975
6. ತಿಪ್ಪೆರುದ್ರಸ್ವಾಮಿ, ಹೆಚ್– ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು–2010